ಮೈಸೂರು ನಗರದ ಜನಸಂಖ್ಯೆಯ ಬಗ್ಗೆ

೯೬ (೨೫೨-೧) ಶ್ರೀಮತಿ ಮುಖ್ತಾರುನ್ನೀಸಾ (ನರಸಿಂಹರಾಜ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಹಾಲಿ ಮೈಸೂರು ನಗರದ ಜನಸಂಖ್ಯೆ ಮತ್ತು ಈಗಿರುವ ವಾಸದ ಮನೆಗಳು ಎಷ್ಟು ?

ಆ) ಮೈಸೂರು ನಗರದ ಗಾತ್ರದ ಬೆಳವಣಿಗೆ ಮತ್ತು ಜನಸಂಖ್ಯೆ ದೇಶದ ಇತರ ಮುಖ್ಯ ನಗರಗಳಂತೆ ಬೆಳೆಯುತ್ತಿರುವುದು ನಿಜವಲ್ಲವೆ ?

ಇ) ಶೈಕ್ಷಣಿಕ ಸೌಲಭ್ಯಗಳು ಕ್ರೀಡೆ ಸಾಂಸ್ಕೃತಿಕ ಮತ್ತು ದಾರ್ಮಿಕ ಸಂಸ್ಥೆಗಳನ್ನೊಳಗೊಂಡ ಯೋಜಿತ ಅಭಿವೃದ್ಧಿಯು ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಬದಲಿಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರವೆಂಬ ಸಂಸ್ಥೆಯನ್ನು ಜಾರಿಗೆ ತರಲು ಸರ್ಕಾರವು ಯೋಚಿಸಿಲ್ಲವೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ರಚಿವರು).—

ಮೈಸೂರು ನಗರದ ಜನಸಂಖ್ಯೆ:

ಅ) ೧೯೮೧ರ ಜನಗಣತಿ ಪ್ರಕಾರ | ೪,೭೬,೪೪೬

ಆ) ೧೯೮೬ನೇಯ ಇಸವಿಯ ಮಧ್ಯ ವರ್ಷದ ಜನಸಂಖ್ಯೆ—೫,೫೩,೧೧೯

ಇ) ಹಾಲಿ ವಾಸದ ಮನೆಗಳು—೮೩,೦೮೪

ಅ) ಮೈಸೂರು ನಗರವು ತೀವ್ರವಾಗಿ ಬೆಳವಣಿಗೆಯಾಗುತ್ತಿದೆ ಮತ್ತು ಜನಸಂಖ್ಯೆಯೂ ಹೆಚ್ಚಾಗುತ್ತಿದೆ.

ಇ) ಹೌದು. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ನಿಪ್ಪಾಣಿ ನಗರಕ್ಕೆ ನೀರು ಸರಬರಾಜು ಅಭಿವೃದ್ಧಿ ಯೋಜನೆ ಬಗ್ಗೆ

೯೭ (೨೫೨) ಶ್ರೀ ವೀರಕುಮಾರ್ ಅಪ್ಪಾಸೋ ಪಾಟೀಲ್ (ನಿಪ್ಪಾಣಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ನಿಪ್ಪಾಣಿ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಅಭಿವೃದ್ಧಿ ಯೋಜನೆ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮ ?

ಆ) ಯೋಜನೆಯ ಅಂದಾಜು ವೆಚ್ಚ ಎಷ್ಟು ?

ಇ) ಮೇಲಿನ ಯೋಜನೆಗೆ ಸಾಲ ಪಡೆಯಲು ಸರ್ಕಾರವು ಖಾತರಿ ನೀಡುವುದೇ ?

ಈ) ಸರ್ಕಾರವು ಈ ಯೋಜನೆಗೆ ಏನಾದರೂ ಆರ್ಥಿಕ ಸಹಾಯ ನೀಡುವುದೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಈ ಬಗ್ಗೆ ಪ್ರಸ್ತಾವನೆ ಸರ್ಕಾರಕ್ಕೆ ಇನ್ನೂ ಬಂದಿರುವುದಿಲ್ಲ. ಯೋಜನೆಯ ಬಗ್ಗೆ ಪ್ರಸ್ತಾವನೆ ಬಂದ ಕೂಡಲೇ ಪರಿಶೀಲಿಸಲಾಗುವುದು.

ಆ) ೧೯೮೬-೮೭ರ ದರಗಳ ಪ್ರಕಾರ ೨೮೦.೦೦ ಲಕ್ಷ ರೂ.ಗಳು ಅಂದಾಜು ಆಗಬಹುದೆಂದು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ತಿಳಿಸಿದೆ.

ಇ) ಪ್ರಸ್ತಾವನೆ ಮಂಡಳಿಯಿಂದ ಬಂದ ನಂತರ ಪರಿಶೀಲಿಸಲಾಗುವುದು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಅಧ್ಯಕ್ಷರು.—ಮಂತ್ರಿಗಳು ಸಭೆಯ ಮುಂದಿಡಲಾಗುವ ಕಾಗದ ಪತ್ರಗಳನ್ನು ಮಂಡಿಸುವುದು.

ಶ್ರೀ ಎಂ. ರಘುಪತಿ (ಮೀನುಗಾರಿಕಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಭಾರಿ ಮತ್ತು ಮಧ್ಯಮ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳ ಪರವಾಗಿ, ೧೯೫೬ನೇ ಇಸವಿ ಕಂಪನಿಗಳ ಶಾಸನ ೬೧೯ (ಎ) ಕಲಮಿನ ಮೇರೆಗೆ

೧೯೮೫-೮೬ನೇ ಸಾಲಿನ ಕರ್ನಾಟಕ ವಿದ್ಯುತ್ ನಿಗಮ ನಿಯಂತ್ರಿತದ ೧೬ನೇ ವಾರ್ಷಿಕ ವರದಿಯನ್ನು ಹಾಗೂ

೨) ೧೯೪೯ನೇ ಇಸವಿ ವಿದ್ಯುಚ್ಛಕ್ತಿ ಸರಬರಾಜು ಅಧಿನಿಯಮದ ೬೯ನೇ ಪ್ರಕರಣದ ೫ (ಎ) ಉಪ ಪ್ರಕರಣದ ಮೇರೆಗೆ

೧೯೮೫-೮೬ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಲೆಕ್ಕಗಳು, ಆಸ್ತಿ ಮತ್ತು ಹೊಣೆಯನ್ನು ವರದಿಯೊಂದಿಗೆ ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು. ಈಗ ವರದಿಗಳನ್ನೊಪ್ಪಿಸುವುದು.

ಶ್ರೀ ಎಂ.ಎಸ್. ಕೃಷ್ಣನ್.—ನಾನು ಆಗಲೇ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದೆ. ಪ್ರಶ್ನೋತ್ತರ ವೇಳೆ ಇದ್ದುದರಿಂದ ಮತ್ತು ತಾವು ಹೇಳಿದುದರಿಂದ ತಮ್ಮ ಮಾತಿಗೆ ಬೆಲೆ ಕೊಟ್ಟು ಕುಳಿತುಕೊಂಡೆ.

(ಗೊಂದಲ)

ಅಧ್ಯಕ್ಷರು.—ಈಗ ವರದಿಗಳನ್ನು ಒಪ್ಪಿಸಲಿ, ಆಜೆಂಡಾ ಪ್ರಕಾರ ನಾನು ಹೋಗುತ್ತಿದ್ದೇನೆ.

(ಗೊಂದಲ)

ಶ್ರೀ ಎಂ.ಎಸ್. ಕೃಷ್ಣನ್.—ಇವತ್ತಿನ ದಿವಸ ಒಬ್ಬ ಮಂತ್ರಿಗಳಿಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಕೌನ್ಸಿಲ್‌ಗೆ ಹೋಗಬಹುದು ಪ್ರಶ್ನೆ.....

(ಗೊಂದಲ)

ಅಧ್ಯಕ್ಷರು.—ಈಗ ನಾನು ಅವಕಾಶ ಕೊಡುವುದಿಲ್ಲ. ನಾವೂ ನೀವೂ ಸೇರಿ ಮಾತನಾಡೋಣ.

ಶ್ರೀ ಎಂ.ಎಸ್. ಕೃಷ್ಣನ್.—ಆಗಲೇ ಎದ್ದುನಿಂತೆ ತಾವು ಕೂರಿಸಿದಿರಿ. ಪ್ರಶ್ನೋತ್ತರ ವೇಳೆಯಾದ ನಂತರ ನಿಂತಿದ್ದೇನೆ.

ಅಧ್ಯಕ್ಷರು.—ಈಗಲೂ ಪಾಯಿಂಟ್ ಆಫ್ ಆರ್ಡರ್ ಇಲ್ಲ, ಆಲೋ ಮಾಡುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಯಾವ ರೂಲ್‌ನಲ್ಲಿ ಇದೆ ?

ಅಧ್ಯಕ್ಷರು.—ಈಗ ವರದಿಯನ್ನು ಒಪ್ಪಿಸಲಿ. ತಾವು ದಯವಿಟ್ಟು ತಾವು ಕುಳಿತುಕೊಳ್ಳಿ. ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆ ಬರುವುದಿಲ್ಲ. ಆಜೆಂಡಾ ಪ್ರಕಾರ ಬಿಟ್ಟು ಡೀವಿಯೇಷನ್ ಮಾಡಿದರೆ ಪಾಯಿಂಟ್ ಆಫ್ ಆರ್ಡರ್ ಬರುತ್ತದೆ. ಈಗ ಆಜೆಂಡಾ ಪ್ರಕಾರ ಹೊರಟಿದ್ದೇವೆ.

SRI M.S. KRISHNAN.—Point of Order in regard to any violation of the rules of procedure by either the Speaker or any Member can be raised by another Member.

ಅಧ್ಯಕ್ಷರು.—ಏನೂ ವೈಯೊಲೇಷನ್ ಆಗಿಲ್ಲ.

SRI M.S. KRISHNAN.—Point of Order.

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ ನಾನು ಹೇಳುತ್ತೇನೆ. ಆಮೇಲೆ ನೋಡೋಣ. ನಿಮ್ಮ ಆರ್ಗ್ಯುಮೆಂಟ್ಸ್ ನನಗೆ ವಿತಕ್ಕೂ ಬೇಕಾಗಿಲ್ಲ. ಆಜೆಂಡಾ ಪ್ರಕಾರ ಹೊರಟಿದ್ದೇನೆ. ನಿಮ್ಮನ್ನು ಕರೆಸುತ್ತೇನೆ, ನಾವು ನೀವು ಕೂಡಿ ಮಾತನಾಡೋಣ. ಈಗ ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆ ಬರುವುದಿಲ್ಲ.